ಮಹಾತ್ಮ ಗಾಂಧಿ

ಮತ್ತು

ಆಧ್ಯಾತ್ಮಿಕ ರಾಜಕಾರಣ



ಡಾ. ವೂಡೇ ಪಿ. ಕೃಷ್ಣ



ಮಹಾತ್ಮ ಗಾಂಧಿ
ಮತ್ತು
ಆಧ್ಯಾತ್ಮಿಕ ರಾಜಕಾರಣ

ಡಾ. ವೂಡೇ ಪಿ. ಕೃಷ್ಣ

GANDHI
PEACE
FOUNDATION

ಗಾಂಧೀ ಶಾಂತಿ ಪ್ರತಿಷ್ಠಾನ
ಗಾಂಧೀಭವನ, ಬೆಂಗಳೂರು

Mahatma Gandhi Mattu Adhyatmika Rajakaarana
by
Dr. Wooday P. Krishna
Chairman, Gandhi Peace Foundation
Bangalore
E-mail: woodaypkrishna@yahoo.co.in

Published by
Gandhi Peace Foundation
Gandhi Bhavan
Bangalore

© Author
Pages: 24
First Edition : 2018
Size : Demmy 1/16
Copies : 1000
Paper Used: 80 GSM NS Maplitho
Price: ₹ 10

© ಲೇಖಕರದು
ಪ್ರಥಮ ಮುದ್ರಣ : 2018
ಪುಟಗಳು : 24
ಬೆಲೆ : ₹ 10
ಮುಖಪುಟ : ಶ್ವೇತ ಬಿ.ಎಸ್.

ಹತ್ತು ವರ್ಷಗಳ ಮುದ್ರಣಕಲೆಯ ಸಡಗರದಲ್ಲಿ
ಸ್ವಾನ್ ಪ್ರಿಂಟರ್ಸ್
2007 - 2017 ☎ 080-26742233



ಪ್ರಕಾಶಕರ ಮಾತು

ಭಾರತಕ್ಕೆ ಸ್ವಾತಂತ್ರ್ಯ ಬಂದು ಎಪ್ಪತ್ತು ವರ್ಷಗಳು ಕಳೆದಿವೆ. ಮಹಾತ್ಮ ಗಾಂಧೀಜಿ ಅವರ 'ಹಿಂದ್ ಸ್ವರಾಜ್' (1909) ಪ್ರಕಟವಾಗಿ ಇಲ್ಲಿಗೆ ಒಂದುನೂರ ಹತ್ತು ವರ್ಷಗಳು ಸಂದುತ್ತಿವೆ. ಸ್ವಾತಂತ್ರ್ಯಪೂರ್ವ ಭಾರತ ಮತ್ತು ಸ್ವಾತಂತ್ರ್ಯೋತ್ತರ ಭಾರತ ಇವುಗಳ ನಡುವಣ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ಔದ್ಯೋಗಿಕ ನೆಲೆಗಳ ಬಗೆಗೆ ಅನೇಕರು ಚರ್ಚಿಸಿದ್ದಾರೆ. ಈಗಲೂ ಚರ್ಚಿಸುತ್ತಿದ್ದಾರೆ. ಅವುಗಳು ಬಹುತೇಕವಾಗಿ ಪಕ್ಷಪಕ್ಷಗಳ ಧೋರಣೆಯೋ ಸೈದ್ಧಾಂತಿಕ ಹಿನ್ನೆಲೆಯೋ ವಸಾಹತುಶಾಹಿ ಮನಃಸ್ಥಿತಿಗಳಿಂದಲೋ ಇರುವುದುಂಟು! ಶುದ್ಧವಾದ ಸತ್ಯಸಿದ್ಧಾಂತ ಅಥವಾ ಗಾಂಧೀಜಿ ಕಂಡ ಕನಸಿನ ಭಾರತವನ್ನು ಕುರಿತು ಪೂರ್ಣ ದೃಷ್ಟಿಯಿಂದ ಮಾತನಾಡುವುದು ಈಗಂತೂ ತುಂಬಾ ಅವಶ್ಯವಿದೆ! ಕುವೆಂಪು ಅವರು ಪೂರ್ಣದೃಷ್ಟಿ, ಸಮನ್ವಯ ಮತ್ತು ಅನಿಕೇತ ಪ್ರಜ್ಞೆಯನ್ನು ತಮ್ಮ

ಕೃತಿಗಳಲ್ಲಿ ಸಾರಿದರು. ಅವು ಕವಿಸಹಜ ಮಾತಿನಿಂದ ರೂಪಿತಗೊಂಡಿದ್ದವು. ಈ ಮಾತುಗಳನ್ನು 'ಆಧ್ಯಾತ್ಮೀಕರಣ' ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಡಾ. ವೂಡೇ ಪಿ. ಕೃಷ್ಣ ಅವರು ವಿಶ್ಲೇಷಿಸುತ್ತಿದ್ದಾರೆ.

ಡಾ. ವೂಡೇ ಪಿ. ಕೃಷ್ಣ ಅವರು ಶ್ರೀರಾಮಕೃಷ್ಣ ಪರಮಹಂಸ-ಸ್ವಾಮಿ ವಿವೇಕಾನಂದರ ಅಗ್ನಿದಿವ್ಯದಿಂದ ಎದ್ದು ಬಂದವರು. ಗಾಂಧೀಜಿಯವರ ಅಹಿಂಸೆ ಮತ್ತು ಸತ್ಯಾಗ್ರಹ ಇವೆರಡರ ದೃಷ್ಟಿಯಿಂದ ನಮ್ಮ ದೇಶದ ಪ್ರಸ್ತುತ ಪರಿಸ್ಥಿತಿಯನ್ನು ಕ್ಷಕಿರಣದ ದೃಷ್ಟಿಯಿಂದ ನೋಡಿದವರು. ಪಕ್ಷ, ವ್ಯಕ್ತಿ ಎಲ್ಲರಲ್ಲೂ ಇರುವುದು ಆಂಶಿಕದೃಷ್ಟಿಯೇ ಹೊರತು; ಸಮಷ್ಟಿದೃಷ್ಟಿಯಲ್ಲ. ವೈಯಕ್ತಿಕ ಹಿತಾಸಕ್ತಿ ನಮ್ಮನ್ನು ಅಪಾಯದ ಅಂಚಿಗೆ ಕರದೊಯ್ಯುವುದೆಂಬುದು ನಿಶ್ಚಿತ. ಆದರೆ, ವೈಯಕ್ತಿಕತೆಯನ್ನು ಮೀರಿ ಸಾರ್ವಜನಿಕ ದೃಷ್ಟಿಯನ್ನು ಪಡೆಯುವುದು ಇಂದಿನ ಅಗತ್ಯಗಳಲ್ಲಿ ಒಂದು. ಅದು ಪೂರೈಸಬೇಕಾದರೆ, ಗಾಂಧೀಜಿ ಅವರ ಮಾರ್ಗ ದರ್ಶನಕ್ಕೆ ನಾವು ತಲೆಬಾಗಲೆಬೇಕಾಗುತ್ತದೆ. ನಾವಿಂದು ಗಾಂಧೀಜಿ ಅವರನ್ನು ಕೇವಲ ಸಾಂಕೇತಿಕವಾಗಿ ಗುರುತಿಸಿ ಕೊಳ್ಳುತ್ತಿದ್ದೇವೆ. ಅವರು ಸಾರಿದ ಮಾರ್ಗ ದರ್ಶನವನ್ನು ನಾವಿನ್ನೂ ಆತ್ಮಸಾತ್ ಮಾಡಿಕೊಳ್ಳುತ್ತಿಲ್ಲ. ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನವನ್ನೂ ನಾವು ಮಾಡಿಕೊಳ್ಳುತ್ತಿಲ್ಲ. ಗಾಂಧೀಜಿ ಆದರ್ಶ ಕೇವಲ ಕನ್ನಡಿಯ ಗಂಟಾಗಿದೆ. ಅದು ನಮ್ಮ ಬದುಕಿನ ವಾಸ್ತವಕ್ಕೆ ದೀವಿಗೆಯಾಗಬೇಕಾಗಿದೆ. ಆ ದಿಕ್ಕಿನಲ್ಲಿ ನಾವೆಲ್ಲಾ ಸಾಗಬೇಕಾಗಿದೆ. ಇದು ವೂಡೇ ಪಿ. ಕೃಷ್ಣ ಅವರ ಪ್ರಾಮಾಣಿಕವಾದ ಕಳಕಳಿ! ಸಮಸ್ತ ಕ್ರಿಯಾಕಲಾಪಗಳೆಲ್ಲವೂ ಆಧ್ಯಾತ್ಮೀಕರಣದಲ್ಲಿ ಸಂಭವಿಸಬೇಕೆಂಬ ಗಾಢವಾದ ನಂಬುಗೆ!

ಈ ಸಂಗತಿಗಳ ಹಿನ್ನೆಲೆಯಲ್ಲಿ ಡಾ. ವೂಡೇ ಪಿ. ಕೃಷ್ಣ ಅವರ ಇಲ್ಲಿಯ ಮಾತುಗಳನ್ನು ಕಳಕಳಿಯಿಂದ ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ನಮ್ಮ ನಿಷ್ಠೆ ಮತ್ತು ನಡವಳಿಕೆಗಳು ರಾಷ್ಟ್ರಪ್ರಜ್ಞೆಗೆ ಅಧೀನವಾಗಿರಬೇಕು! ನಮ್ಮ ದೇಶದ ಮೌಲ್ಯಗಳಿಗೆ ನಾವು ತಲೆಬಾಗಬೇಕು. ಆದರೆ, ನಾವು ಇದರಿಂದ ಕ್ರಮಕ್ರಮವಾಗಿ ಹಿಂದೆ ಸರಿಯುತ್ತಿದ್ದೇವೆ. ಇಂದಿನ ರಾಜಕಾರಣಿಗಳು ನಿಜವಾದ ವಿರಕ್ತರಾಷ್ಟ್ರಕರಾಗಿರಬೇಕಿತ್ತು. ಆಗ ವೈಯಕ್ತಿಕತೆಯು ಸಾರ್ವತ್ರಿಕ ಭಾವನೆಯಲ್ಲಿ ಅದ್ದಿ ಹೋಗುತ್ತಿತ್ತು. ನಮ್ಮ ಭಾವಗಳು ನಿಂತ ನೀರಾಗಕೂಡದಷ್ಟೆ. ನಮ್ಮ ಆಲೋಚನೆಗಳು ಮಹದಾಲೋಚನೆಗಳಾಗಿ ಜನಮನವನ್ನು ಆವರಿಸಿಕೊಳ್ಳಬೇಕು. ನಾವು ರೋಗಮುಕ್ತ ಅಥವಾ ಸ್ವಚ್ಛಯುಕ್ತ ಭಾರತವನ್ನು ರೂಪಿಸಬೇಕೆಂಬ ಹಂಬಲದಲ್ಲಿ ಮಾನಸಿಕ ಸ್ವಚ್ಛತೆಯಿಂದ ದೂರ ಸರಿದು ಬಿಡುತ್ತಿದ್ದೇವೆ. ಇದು ಕಳವಳಕಾರಿ ಸಂಗತಿ!

ಡಾ. ವೂಡೇ ಪಿ. ಕೃಷ್ಣ ಅವರು ಸಮಾಜ-ದೇಶ-ರಾಜಕಾರಣ; ರಾಷ್ಟ್ರದ ಅಭಿವೃದ್ಧಿ ಮೀಮಾಂಸೆ, ರಾಜ್ಯದ ಪುನರುತ್ಥಾನ ಇವುಗಳೆಲ್ಲವೂ ಇದೀಗ ಹಳ್ಳ ಹಿಡಿಯುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಬಹಿರಂಗದ ವಿಜೃಂಭಣೆಯಲ್ಲಿ ಎಲ್ಲರೂ ಮುಳುಗೇಳುತ್ತಿದ್ದಾರೆ; ಅಂತರಂಗದ ಶಾಂತಿಸ್ಥಿತಿಯ ರಹಸ್ಯವನ್ನು ಯಾರೂ ಆಚರಿಸುತ್ತಿಲ್ಲ. ನಾವು ಮಾತಿಗಿಂತ, ಮೌನಕ್ಕೆ, ಅದಮ್ಯಭಾವಕ್ಕೆ, ಸತ್ಯದ ನಿಲುಗಡೆಗೆ ಸಾಗಬೇಕಾಗಿದೆ. ಇಂಥ ತಾತ್ತ್ವಿಕ ಮುಕ್ತಚರ್ಚೆಯಿಂದ ಮಾತ್ರ ಸಮಾಜವನ್ನೂ ಗಾಂಧೀಪ್ರಣೀತ 'ರಾಮರಾಜ್ಯ'ವನ್ನೂ ನಾವು ಕಾಣಬಹುದಾಗಿದೆ. ನಮಗೆ ಅಧ್ಯಾತ್ಮ

ಜಗತ್ತಿನ ಸಂಕೇತವಾಗಿ ಶ್ರೀರಾಮಕೃಷ್ಣ ಪರಮಹಂಸ-ಶ್ರೀರಮಣರಿದ್ದಾರೆ. ರಾಷ್ಟ್ರಕುಂಡಲಿನಿಯು ಸಮಸ್ತವನ್ನು ಜಾಗೃತಗೊಳಿಸಲು ಸ್ವಾಮಿ ವಿವೇಕಾನಂದರು ಹಲವು ರೂಪಗಳಲ್ಲಿ ನಮ್ಮೊಡನೆ ಇದ್ದಾರೆ! ನಮ್ಮ ನೆಲೆಯನ್ನು ನಾವು ತಿಳಿಯುತ್ತ, ಪ್ರತಿದಿನವೂ ವಿರಕ್ತರಾಷ್ಟ್ರಕರಾಗಿಯೇ ಉಳಿಯಲು ಮಹಾತ್ಮ ಗಾಂಧೀಜಿಯವರು ನಮ್ಮೊಡನೆ ಇದ್ದಾರೆ. ಡಾ. ವೂಡೇ ಪಿ. ಕೃಷ್ಣ ಅವರು ಈ ದಿಕ್ಕಿನಲ್ಲಿ ನಡೆಸಿರುವ ಚಿಂತನೆಗಳು ನಮ್ಮ ರಾಷ್ಟ್ರಬದುಕಿಗೆ ಸಮೀಪವಾಗಿವೆ. ನಮ್ಮ ಬದುಕಿಗೆ ಕೈದೀವಿಗೆಯಂತಾಗಿವೆ. ರಾಜಕಾರಣವನ್ನು ಆಧ್ಯಾತ್ಮೀಕರಣಗೊಳಿಸಿದ ಪ್ರಸಂಗಗಳನ್ನೂ ಘಟನೆಗಳನ್ನೂ ಹೇಳಿದ್ದಾರೆ. ಅವರ ಪ್ರತಿಹೆಜ್ಜೆಯು ಆಧ್ಯಾತ್ಮಿಕವೇ ಆದ ಬಗೆಗಳನ್ನು ಇಲ್ಲಿ ತಿಳಿಸಿದ್ದಾರೆ. ನಮ್ಮ ನಾಡಿನ ಪ್ರತಿಯೊಬ್ಬ ರಾಜಕಾರಣಿಯೂ ಈ ಹೊತ್ತಿಗೆಯನ್ನು ಓದಬೇಕು. ರಾಷ್ಟ್ರ–ಅಧ್ಯಾತ್ಮ–ಸಮಾಜ ತ್ರಿವಳಿಗೀತೆಗಳ ನಡುವೆ ಅವರು ಧ್ಯಾನಸ್ಥರಾಗಬೇಕು. ಇಂಥದೊಂದು ಅಪೂರ್ವ ಕಿರುಹೊತ್ತಗೆಯನ್ನು ರಚಿಸಿಕೊಟ್ಟ ಡಾ. ವೂಡೇ ಪಿ. ಕೃಷ್ಣ ಅವರಿಗೆ ನಮ್ಮ ಜನರ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ.

ಇದು 2017ರ 'ವಿಶ್ವ ತತ್ವಶಾಸ್ತ್ರ ದಿನ'ದಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಭಾರತೀಯ ತತ್ತ್ವಶಾಸ್ತ್ರ ಸಂಶೋಧನಾ ಪರಿಷತ್ ಏರ್ಪಡಿಸಿದ್ದ ಸಮಾರಂಭದಲ್ಲಿ ಅವರು ನೀಡಿದ ಇಂಗ್ಲಿಷ್ ಉಪನ್ಯಾಸವನ್ನು ಶ್ರೀ ಬಿ. ಎಸ್. ಜಯಪ್ರಕಾಶ್ ಅವರು ಕನ್ನಡಿಸಿ ಕೊಟ್ಟಿದ್ದಾರೆ. ಅವರಿಗೆ ನಮ್ಮ ಧನ್ಯವಾದಗಳು ಸಲ್ಲುತ್ತವೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಕಾರ್ಯದರ್ಶಿಗಳು, ಗಾಂಧಿ ಶಾಂತಿ ಪ್ರತಿಷ್ಠಾನ



ಮಹಾತ್ಮ ಗಾಂಧಿ
ಮತ್ತು
ಆಧ್ಯಾತ್ಮಿಕ ರಾಜಕಾರಣ

'ವಿಶ್ವ ತತ್ತ್ವಜ್ಞಾನ ದಿನ'ವಾದ ಇಂದು 'ಮಹಾತ್ಮ ಗಾಂಧಿ: ರಾಜಕಾರಣವನ್ನು ಆಧ್ಯಾತ್ಮೀಕರಿಸಿದ ಸಂತ' ಎನ್ನುವ ವಿಚಾರ ಕುರಿತು ನನ್ನ ಕೆಲವು ವಿಚಾರಗಳನ್ನು ಹಂಚಿಕೊಳ್ಳಲು ನನ್ನನ್ನು ಇಲ್ಲಿಗೆ ಆಹ್ವಾನಿಸಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಭಾರತೀಯ ತತ್ತ್ವಜ್ಞಾನ ಸಂಶೋಧನಾ ಪರಿಷತ್ತಿಗೆ ನಾನು ಕೃತಜ್ಞನಾಗಿದ್ದೇನೆ.

ಬೆಂಗಳೂರಿನ ಗಾಂಧಿ ಭವನದಲ್ಲಿ ಇತ್ತೀಚೆಗೆ ನಡೆದ ಒಂದು ಸಮಾರಂಭದಲ್ಲಿ ಮಾತನಾಡಿದ ಹೆಸರಾಂತ ವಿದ್ವಾಂಸರಾದ ವಿದ್ವಾನ್ ಕೆ. ಜಿ. ಸುಬ್ರಾಯ ಶರ್ಮರು ಈ ಕೆಳಕಂಡ ಸಾಲುಗಳ ಮೂಲಕ ಗಾಂಧೀಜಿಯವರಿಗೆ ತಮ್ಮ ನಮನಗಳನ್ನು ಸಲ್ಲಿಸಿದರು. ಆ ಸಾಲುಗಳು ಹೀಗಿವೆ–

ಪಿತಾಮಹಾಯ ರಾಷ್ಟ್ರಸ್ಯ
ಸತ್ಯಸಂಧಾಯ ಧೀಮತೇ
ಈಶಾಗೀತಾರ್ಥ ನಿಷ್ಠಾಯ
ಮಹಾತ್ಮ ಗಾಂಧಿನೇ ನಮಃ

ನಿಜ, ಗಾಂಧೀಜಿಯವರು ಈಶನಿಷ್ಠರೂ ಗೀತೆಯ ನಿಷ್ಠರೂ ರಾಮಭಕ್ತರೂ ಆಗಿದ್ದರು. ಎಂಥ ಅನರ್ಘ್ಯ, ಅಮೂಲ್ಯವಾದ ಮಾತುಗಳನ್ನು ಶರ್ಮರು ಆಡಿದ್ದಾರೆ.

ಆತ್ಮವಿಮರ್ಶೆ

ಗಾಂಧೀಜಿಯವರನ್ನು ಮನುಕುಲದ ಸಕ್ರಿಯ ಆಧ್ಯಾತ್ಮಿಕ ನಾಯಕರಲ್ಲಿ ಒಬ್ಬರೆಂದು ಗುರುತಿಸಲಾಗಿದೆ. ಏಕೆಂದರೆ, ಈ ಲೌಕಿಕ ಜಗತ್ತಿನಲ್ಲಿದ್ದುಕೊಂಡೇ ಆಧ್ಯಾತ್ಮಿಕತೆಯನ್ನು ಅವರು ರೂಢಿಸಿಕೊಂಡಿದ್ದರು. ಅವರು ಸುತ್ತಮುತ್ತಲಿನ ಅನ್ಯಾಯ, ದ್ವೇಷ, ಕ್ಷುಲ್ಲಕತೆ, ಭಯ, ಹಿಂಸೆ ಇವುಗಳನ್ನೆಲ್ಲ ನ್ಯಾಯ, ಪ್ರೀತಿ, ಕರುಣೆ, ಸಮಚಿತ್ತ, ಧೈರ್ಯ ಮತ್ತು ಅಹಿಂಸೆಗಳ ಮೂಲಕವೇ ನಿವಾರಿಸಲು ಶ್ರಮಿಸಿದರು. ಗಾಂಧೀಜಿಯವರ ಬದುಕು, ಅವರ ಕಾಲದ ಉಳಿದೆಲ್ಲ ನಾಯಕರ ಬದುಕಿಗಿಂತ ಅತ್ಯಂತ ಪಾರದರ್ಶಕವಾಗಿತ್ತು. ಹೀಗಾಗಿಯೇ ಅವರು 'ನನ್ನ ಬದುಕೇ ನನ್ನ ಸಂದೇಶ' ಎಂದು ಘೋಷಿಸಿದರು.

ಗಾಂಧೀಜಿಯವರ ಆತ್ಮಕತೆ 'ಮೈ ಎಕ್ಸ್‌ಪೆರಿಮೆಂಟ್ಸ್ ವಿತ್ ಟ್ರೂತ್' (ನನ್ನ ಸತ್ಯಾನ್ವೇಷಣೆ) 1927ರಲ್ಲಿ ಪ್ರಕಟವಾಯಿತಷ್ಟೆ. ಅವರ 1920ರವರೆಗಿನ ಬದುಕಿನ ಕಥನವನ್ನು ಅದು ಒಳಗೊಂಡಿದೆ. ಈ ಆತ್ಮಕತೆಯಲ್ಲಿ ಗಾಂಧೀಜಿಯವರು ತಮ್ಮ ಬಾಲ್ಯ ಮತ್ತು ಪ್ರಾಯದ ದಿನಗಳಲ್ಲಿ ಆಧ್ಯಾತ್ಮಿಕತೆಯು ಹೇಗೆ ಪ್ರಭಾವ ಬೀರಿತು ಎನ್ನುವುದನ್ನು ದೀರ್ಘವಾಗಿ ಹೇಳಿಕೊಂಡಿದ್ದಾರೆ. ಬಾಲ್ಯದಲ್ಲಿ ಸತ್ಯಹರಿಶ್ಚಂದ್ರನನ್ನು ಕುರಿತ ನಾಟಕವನ್ನು ನೋಡಿ, ಅದರಿಂದ ಪ್ರಭಾವಿತರಾದ ಗಾಂಧೀಜಿ, ಜೀವನದಲ್ಲಿ ಯಾವತ್ತಿಗೂ ಸುಳ್ಳು ಹೇಳಬಾರದೆಂದು ತೀರ್ಮಾನಿಸಿದರು. ಅಷ್ಟೇ ಅಲ್ಲ, ಅವರು ಅಲ್ಲಿಂದಾಚೆಗೆ ತಮ್ಮ ಕೊನೆಯುಸಿರು ಇರುವವರೆಗೂ ಸುಳ್ಳನ್ನಾಡಲಿಲ್ಲ. ಅವರ ಪಾಲಿಗೆ 'ಸತ್ಯವೇ ದೇವರು ಮತ್ತು ದೇವರೇ ಸತ್ಯ'ವಾಗಿತ್ತು. ಆಧ್ಯಾತ್ಮಿಕತೆಯ ದೃಷ್ಟಿಯಿಂದ ಹೇಳುವುದಾದರೆ, ಗಾಂಧೀಜಿಯವರು ತಮ್ಮ ತಾಯಿ-ತಂದೆ ಮತ್ತು ಸಂತ ಜೈನ ಕವಿ ಶ್ರೀಮದ್ ರಾಜಚಂದ್ರ ಅವರಿಂದ ಪ್ರಭಾವಿತರಾಗಿದ್ದರು. ಅಂದಹಾಗೆ, ಇದು ಶ್ರೀಮದ್ ರಾಜಚಂದ್ರ ಅವರ 150ನೇ ಜನ್ಮ ದಿನಾಚರಣೆಯ ವರ್ಷವಾಗಿದೆ. ಇಂಥ ಗಾಂಧೀಜಿಯವರು ಭಗವದ್ಗೀತೆ, ಬೈಬಲ್, ಲಿಯೋ ಟಾಲ್ಸ್ಟಾಯ್ ಅವರ 'ಕಿಂಗ್ಡಂ ಆಫ್ ಗಾಡ್ ಈಸ್ ವಿತಿನ್ ಯು,' ಗ್ರಂಥಗಳನ್ನು ಓದಿದ್ದರು. ಅಲ್ಲದೆ, ಥೋರೋನ 'ಸಿವಿಲ್

ಡಿಸ್‌ಒಬಿಡಿಯನ್ಸ್' ಮತ್ತು ರಸ್ಕಿನ್ ಬಾಂಡ್‌ನ 'ಅನ್ ಟು ದಿಸ್ ಲಾಸ್ಟ್' ಕೃತಿಗಳಿಂದಲೂ ಅವರು ಅಪಾರ ಪ್ರಭಾವ ಕ್ಕೊಳಗಾಗಿದ್ದರು.

ರಾಜಕಾರಣದ ನೆಲೆ-ಬೆಲೆ

ಗಾಂಧೀಜಿಯವರು 'ರಾಜಕಾರಣವನ್ನು ಆಧ್ಯಾತ್ಮೀಕರಿಸಿದ ಸಂತ' ಎಂಬ ಅನನ್ಯವಾದ ಗೌರವಕ್ಕೆ ಪಾತ್ರರಾಗಿದ್ದಾರೆ, ನಿಜ. ಇದರ ಬುನಾದಿ, ಅವರ ದಕ್ಷಿಣ ಆಫ್ರಿಕಾದ ದಿನಗಳಲ್ಲೇ ಇದೆ. ಏಕೆಂದರೆ, ಅವರು ಆ ದೇಶದಲ್ಲಿದ್ದಾಗಲೇ ಮೊದಲಿಗೆ ಜಾನಾಂಗೀಯ ತಾರತಮ್ಯದ ವಿರುದ್ಧ ಹೋರಾಟವನ್ನು ನಡೆಸಿದ್ದರು. ದರ್ಬಾನ್‌ನಲ್ಲಿ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಗಾಂಧೀಜಿಯವರನ್ನು ಅಲ್ಲಿಯ ಬಿಳಿಯನೊಬ್ಬ 'ನೀನೊಬ್ಬ ಕರಿಯ, ನಿನಗಿಲ್ಲಿ ಜಾಗವಿಲ್ಲ,' ಎಂದು ಬೈದು, ಹೊರದಬ್ಬಿದ್ದನು. ಆ ಒಂದು ಘಟನೆಯು, ಗಾಂಧೀಜಿಯುವರು ತವ್ಮು ಜೀವಮಾನದುದ್ದಕ್ಕೂ ಅನ್ಯಾಯದ ವಿರುದ್ಧ ಸೆಟೆದು ನಿಲ್ಲಲು ನಾಂದಿ ಹಾಡಿತು. ಇದು ತನ್ನಷ್ಟಕ್ಕೆ ತಾನೇ ಒಂದು ಬಹುದೊಡ್ಡ ಆಧ್ಯಾತ್ಮಿಕ ಪರಿವರ್ತನೆಯಾಯಿತು. ಗಾಂಧೀಜಿಯವರು 'ಸತ್ಯ' ಮತ್ತು 'ಅಹಿಂಸೆ'ಗಳ ದೀಕ್ಷೆ ತೆಗೆದುಕೊಂಡಿದ್ದು ಕೂಡ ದಕ್ಷಿಣ ಆಫ್ರಿಕಾದಲ್ಲಿಯೇ! ಈ ಬಗ್ಗೆ ಅವರು "ಈ ಎರಡೂ ಆದರ್ಶಗಳು

ಜಗತ್ತಿನಲ್ಲಿರುವ ಗಿರಿಪಂಕ್ತಿಗಳಷ್ಟೇ ಪುರಾತನವಾದವು. ನಾನೇನಿದ್ದರೂ ಈ ಆದರ್ಶಗಳನ್ನು ನನ್ನ ಬದುಕು ಮತ್ತು ಕ್ರಿಯೆಯಲ್ಲಿ ಅನುಸರಿಸಲು ಪ್ರಯತ್ನಿಸುತ್ತಿದ್ದೇನಷ್ಟೆ," ಎಂದು ಹೇಳುತ್ತಿದ್ದರು.

1909ರಲ್ಲಿ ಗಾಂಧೀಜಿಯವರು ತಮ್ಮ ಅಸಾಧಾರಣ ಕೃತಿಯಾದ 'ಹಿಂದ್ ಸ್ವರಾಜ್' ಅನ್ನು ಪ್ರಕಟಿಸಿದರು. ಇದಾದ ಆರು ವರ್ಷಗಳ ನಂತರ, ಅಂದರೆ 1915ರಲ್ಲಿ ಅವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದರು. ತಾಯ್ನಾಡಿಗೆ ಬಂದವರೇ, ತಮ್ಮ ರಾಜಕೀಯ ಮಾರ್ಗದರ್ಶಕರಾದ ಶ್ರೀ ಗೋಪಾಲಕೃಷ್ಣ ಗೋಖಲೆಯವರ ಸಲಹೆಯ ಮೇರೆಗೆ ಇಡೀ ದೇಶವನ್ನು ಸುತ್ತಿದರು. ಈ ಮೂಲಕ ಅವರು ತಮ್ಮನ್ನು ತಾವು ಶ್ರೀಸಾಮಾನ್ಯನೊಂದಿಗೂ ಆತನ ಕಷ್ಟ-ನಷ್ಟಗಳೊಂದಿಗೂ ಗುರುತಿಸಿಕೊಂಡರು. "ನೀನು ಜನರ ಬಳಿಗೆ ಹೋಗು, ಅವರೊಡನೆ ಬದುಕು, ಅವರನ್ನು ಅರ್ಥ ಮಾಡಿಕೊ ಮತ್ತು ಅವರಿಂದ ಕಲಿ," ಎನ್ನುವುದು ಗೋಖಲೆಯವರು ಗಾಂಧೀಜಿಗೆ ಹೇಳಿದ ಸಾಮಾಜಿಕ ಪಾಠವಾಗಿತ್ತು. ಅಲ್ಲದೆ, ಭಾರತಕ್ಕೆ ಬಂದಿಳಿದ ಗಾಂಧೀಜಿಗೆ ಅವರು "ನೀನು ಒಂದು ವರ್ಷ ಮೌನವಾಗಿರಬೇಕು," ಎಂದು ಹೇಳಿದ್ದರು. ಗೋಖಲೆಯವರ

ಮಾತಿಗೆ ಬೆಲೆ ಕೊಟ್ಟು ಇಡೀ ಭಾರತದಾದ್ಯಂತ ಕೈಗೊಂಡ ಈ ಪಯಣವೇ ಅದುವರೆಗೂ 'ಬ್ಯಾರಿಸ್ಟರ್' ಆಗಿದ್ದ ಗಾಂಧೀಜಿಯವರನ್ನು 'ಬಡವರ ಸೇವಕ'ನನ್ನಾಗಿ ಪರಿವರ್ತಿಸಿತು.

ಅನಿಬೆಸೆಂಟ್ ಅವರು ಏರ್ಪಡಿಸಿದ್ದ ಒಂದು ರಾಜಕೀಯ ಅಧಿವೇಶನದಲ್ಲಿ ಪಾಲ್ಗೊಂಡಿದ್ದ ಗಾಂಧೀಜಿ, ಅಲ್ಲಿ ಆತ್ಮವಿಮರ್ಶೆ, ಸಮೂಹ ಶಿಕ್ಷಣ, ದುರಾಸೆಯ ನಿಗ್ರಹ ಮತ್ತು ಇವೆಲ್ಲಕ್ಕಿಂತ ಹೆಚ್ಚಾಗಿ ದೇವರಲ್ಲಿ ಇಡಬೇಕಾದ ನಂಬಿಕೆ ಇವುಗಳನ್ನು ಪ್ರತಿಪಾದಿಸಿ, ಮನುಷ್ಯನೊಬ್ಬನ ಯಶಸ್ಸಿಗೆ ಇದೇ ಸರಿಯಾದ ಹಾದಿ ಎಂದು ಸಾರಿದ್ದರು. ಅವರ 'ಆತ್ಮವಿಮರ್ಶೆ'ಯ ಈ ಕಲ್ಪನೆಯೇ, ಅನಂತರದ ದಿನಗಳಲ್ಲಿ ಅವರು ಕೈಗೊಂಡ ಉಪವಾಸ ಸತ್ಯಾಗ್ರಹಗಳಿಗೆ ಬುನಾದಿಯಾಯಿತು. ಸಾಮಾನ್ಯವಾಗಿ, ಸಂತರೆಂದರೆ ನಾವು ಪವಿತ್ರಾತ್ಮರೆಂದೂ, ಅವರ ಸಾಧನೆಗಳು ಅಗೋಚರವೆಂದೂ ನಂಬಿಕೊಂಡಿದ್ದೇವೆ. ಅಂದರೆ, ಅದನ್ನೇನಿದ್ದರೂ ಪ್ರೀತಿ, ನ್ಯಾಯ, ಕರುಣೆ ಇತ್ಯಾದಿಗಳ ಮೂಲಕ ನಾವು ಗ್ರಹಿಸಬಹುದೆನ್ನುವುದು ಇದರ ತಾತ್ಪರ್ಯ. ಹಾಗೆಯೇ, ರಾಜಕಾರಣವೆಂದರೆ ಅದು ಅಧಿಕಾರಕ್ಕಾಗಿನ ಕಚ್ಚಾಟ ಎಂದುಕೊಂಡಿದ್ದೇವೆ. ಇದೇನೇ ಇರಲಿ, ಆ್ಯನಿಬೆಸೆಂಟ್ ಅವರು ಏರ್ಪಡಿಸಿದ್ದ ಆ ಅಧಿವೇಶನದಲ್ಲಿ ಗಾಂಧೀಜಿಯವರು

ರಾಜಕಾರಣಿಗಿಂತ ಹೆಚ್ಚಾಗಿ ಸಂತನಂತೆಯೇ ಮಾತನಾಡಿದರು. ನಿಜ ಗಾಂಧೀಜಿಯವರು ರಾಜಕಾರಣದಲ್ಲಿದ್ದರೂ ಸಂತನಂತೆಯೇ ಇದ್ದರು.

ಆಧ್ಯಾತ್ಮೀಕರಣ

ಗಾಂಧೀಜಿಯವರು 'ನನ್ನ ದೃಷ್ಟಿಯಲ್ಲಿ ರಾಜಕಾರಣವೆಂದರೆ, ಆಧ್ಯಾತ್ಮಿಕ ಪ್ರತಿಪಾದನೆಯೇ ಆಗಿದೆ' ಎಂದು ಘೋಷಿಸಿದ್ದರು. ಬಹಳ ಉನ್ನತ ಮಟ್ಟದ ರಾಜಕಾರಣಿಯಾಗಿದ್ದ ಅವರು, ಸಾರ್ವಜನಿಕ ಜೀವನವನ್ನು ಆಧ್ಯಾತ್ಮೀಕರಿಸಿದರಲ್ಲದೆ, ಅದನ್ನು ಹಲವು ಆಯಾಮಗಳಿಂದ ಮೌಲ್ಯಗಳಿಂದ ಸಮೃದ್ಧಗೊಳಿಸಿದರು. ಅವರ ಪಾಲಿಗೆ ನಾವು ಮಾಡುವ ಕೆಲಸದಲ್ಲೂ ಅದನ್ನು ಮಾಡುವ ವಿಧಾನದಲ್ಲೂ ಶುದ್ಧತೆ ಇರಬೇಕಾದದ್ದು ಮುಖ್ಯವಾಗಿತ್ತು. ಇದನ್ನು ಸ್ವತಃ ತಾವೇ ಮಾಡಿ ತೋರಿಸಬೇಕೆಂಬುದು ಅವರ ನಂಬಿಕೆಯಾಗಿತ್ತು. ಹೀಗಾಗಿ, ಅವರು "ನೀವು ಈ ಕ್ಷಣದ ಬಗ್ಗೆ ಮಾತ್ರ ಚಿಂತಿಸಿ; ದೃಢವಾಗಿ ಪ್ರಯತ್ನಿಸಿ; ಎಂದಿಗೂ ಪ್ರಯತ್ನವನ್ನು ಕೈಬಿಡಬೇಡಿ; ತಪ್ಪು ಮಾಡಿದವರನ್ನು ಕ್ಷಮಿಸಿ, ಮುಂದಡಿ ಇಡಿ; ನಿಮ್ಮನ್ನು ನೀವು ಪರಿವರ್ತಿಸಿಕೊಳ್ಳಿ" ಎನ್ನುವುದೆಲ್ಲ ಅವರ ಮಾತುಗಳೇ ಆಗಿವೆ. ಇಷ್ಟೇ ಅಲ್ಲ, ಅವರು "ಈ ಜಗತ್ತಿನಲ್ಲಿ ಯಾವ ಬದಲಾವಣೆ ಆಗಬೇಕೆಂದು ನಾವು ಬಯಸುತ್ತೀರೋ ಆ

ಬದಲಾವಣೆ ಸ್ವತಃ ನಿಮ್ಮಲ್ಲೇ ಮೊದಲು ಬರಲಿ," ಎಂದು ಹೇಳುತ್ತಿದ್ದರು. ತಮ್ಮ ಕಲ್ಪನೆಯ ಹೊಸ ಸಮಾಜದಲ್ಲಿ ಅವರು ಹೊಸ ಬಗೆಯ ನೈತಿಕತೆಯಿಂದ ಕೂಡಿದ ಮನುಷ್ಯನನ್ನು ಕಾಣಬೇಕೆಂಬುದೇ ಅವರ ಇಡೀ ಜೀವಮಾನದ ಹೋರಾಟವಾಗಿತ್ತು. ಇದನ್ನು ಸಾಧಿಸಲು ಅವರು ಸ್ವ-ಇಚ್ಛೆಯಿಂದ ಸರಳತೆ ಮತ್ತು ಬಡತನಗಳನ್ನು ಅಪ್ಪಿಕೊಂಡರು! ಅಲ್ಲದೆ, 'ಆಶ್ರಮವಾಸಿ'ಯಂತೆ ಅವರು ಬದುಕತೊಡಗಿದರು. ಅವರ ನಡೆ-ನುಡಿಗಳಲ್ಲಿ ಕಿಂಚಿತ್ತೂ ವ್ಯತ್ಯಾಸವಿರಲಿಲ್ಲ. ಅವರಿಗೆ 'ಬಹುದೊಡ್ಡ ನಾಯಕ'ನೆನ್ನುವ ಮನ್ನಣೆಯನ್ನು ತಂದುಕೊಟ್ಟಿದ್ದೇ ಅವರ ವ್ಯಕ್ತಿತ್ವದಲ್ಲಿದ್ದ ಈ ಗುಣವೆಂಬುದನ್ನು ನಾವು ಗಮನಿಸಬೇಕು!

ನಮ್ಮ ದೇಶಕ್ಕೆ ಯಾವ ಬಗೆಯ ಸ್ವಾತಂತ್ರ್ಯ ಬೇಕು ಎನ್ನುವ ಬಗ್ಗೆ ಗಾಂಧೀಜಿಯವರಿಗೆ ಅತ್ಯಂತ ಸ್ಪಷ್ಟವಾದ ಕಲ್ಪನೆ ಇತ್ತು. ಅವರ ದೃಷ್ಟಿಯಲ್ಲಿ, ದೇಶಕ್ಕೆ ಬರೀ ರಾಜಕೀಯ ಸ್ವಾತಂತ್ರ್ಯವಷ್ಟೇ ಸಾಕಾಗಿರಲಿಲ್ಲ. ರಾಜಕೀಯ ಸ್ವಾತಂತ್ರ್ಯವು ಆರ್ಥಿಕ ಪ್ರಗತಿಯ ಜತೆಜತೆಯಲ್ಲಿ ಸಾಗಬೇಕು ಎನ್ನುವುದು ಅವರ ನಿಲುವಾಗಿತ್ತು. ಹೀಗಾಗಿಯೇ ಅವರು, 'ಧರ್ಮದರ್ಶಿತ್ವ'ದಲ್ಲಿ ನಂಬಿಕೆ ಇಟ್ಟಿದ್ದರು. ಶ್ರೀಮಂತರು ತಮ್ಮ ಸಂಪತ್ತಿನ ಧರ್ಮದರ್ಶಿಗಳಾಗಬೇಕು ಎಂದು ಅವರು ಹೇಳುತ್ತಿದ್ದರು. ಅವರ ಈ ಕರೆಗೆ ಓಗೊಟ್ಟು ಬಿರ್ಲಾಗಳು,

ಬಜಾಜ್ ವಂಶಸ್ಥರು, ಫಿರೋದಿಯಾಗಳು ತಮ್ಮ ಔದ್ಯಮಿಕ ಚಟುವಟಿಕೆಗಳಲ್ಲಿ ಈ 'ಧರ್ಮದರ್ಶಿತ್ವ'ದ ಪರಿಕಲ್ಪನೆಯನ್ನು ಅಳವಡಿಸಿಕೊಂಡರು. ಅನಂತರ ತಮ್ಮ ಸಂಪತ್ತಿನ ಗಮನಾರ್ಹ ಭಾಗವನ್ನು ದೇಶಕ್ಕೆ ಕಾಣಿಕೆಯಾಗಿ ಸಮರ್ಪಿಸಿದರು. ಯಾವುದೇ ಒಂದು ನೀತಿ ಅಥವಾ ತೀರ್ಮಾನವನ್ನು ಸರಿಯೋ, ತಪ್ಪೋ ಎಂದು ಅಳೆಯಲು ಗಾಂಧೀಜಿ ಒಂದು ಅದ್ಭುತ ತಂತ್ರವನ್ನು ಅನುಸರಿಸುತ್ತಿದ್ದರು. ಇದರ ಅನುಸಾರವಾಗಿ ಅವರು "ನೀವು ಯಾವುದೇ ಒಬ್ಬ ಬಡವನನ್ನು ನೋಡಿದ ಕ್ಷಣದಲ್ಲಿ, ನೀವಿಡುವ ಒಂದು ಹೆಜ್ಜೆಯಿಂದ ಅವನಿಗೇನಾದರೂ ಉಪಯೋಗ ವಾಗುತ್ತದೆಯೇ?" ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿ ಎಂದು ಕರೆಕೊಟ್ಟರು. ಗಾಂಧೀಜಿಯವರ ಸ್ವರಾಜ್ಯದ ಕಲ್ಪನೆಯು 'ಬಡವರ ಸ್ವರಾಜ್ಯ'ವಾಗಿತ್ತು. ಈ ಬಗ್ಗೆ ಅವರು "ನನ್ನ ತಾತ್ವಿಕತೆ ತುಂಬಾ ಸರಳ. ನಮ್ಮ ದೇಶದಲ್ಲಿ ಬ್ರಿಟಿಷರು ಯಾವ ಆದೇಶವನ್ನು ಹೊರಡಿಸಲೂ ನಾನು ಬಿಡುವುದಿಲ್ಲ," ಎಂದು ಹೇಳುತ್ತಿದ್ದರು. ಬದುಕಿನ ಅಗತ್ಯಗಳಿಗೆ ಸಂಬಂಧಿಸಿದಂತೆ ಸಮತೋಲನವನ್ನು ಸಾಧಿಸುವುದು ಅವರ ಈ ತಾತ್ವಿಕತೆಯ ಕೇಂದ್ರವಾಗಿತ್ತು. ಅಂದರೆ, ಬದುಕಿನಲ್ಲಿ ನಾಲ್ಕು ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಕ್ಕೆ ಅವರು ಪ್ರಾಮುಖ್ಯತೆ ನೀಡಿದ್ದರು. ಸಕಲರ

ಕಲ್ಯಾಣವನ್ನೂ ಒಳಗೊಂಡಿದ್ದ ಸರ್ವೋದಯ ತತ್ವದ ಬಗ್ಗೆ ಗಾಢ ಆಸಕ್ತಿ ಹೊಂದಿದ್ದ ಅವರು, ಅದರ ಮೂರು ಪ್ರಾಥಮಿಕ ಅಂಶಗಳನ್ನು ಹೀಗೆ ಹೇಳಿದ್ದಾರೆ–

* **ಸಮಷ್ಟಿಯ (ಎಲ್ಲರ) ಒಳಿತಿನಲ್ಲೇ ವ್ಯಷ್ಟಿಯ (ಒಬ್ಬ ವ್ಯಕ್ತಿಯ) ಒಳಿತು ಅಡಗಿದೆ.**
* **ತಮ್ಮ ಕಾಯಕದಿಂದ ತಮ್ಮ ಜೀವನೋಪಾಯಕ್ಕೆ ಬೇಕಿರುವಷ್ಟು ಸಂಪಾದನೆ ಮಾಡುವ ಹಕ್ಕು ಎಲ್ಲರಿಗೂ ಇದೆ.**
* **ಕಾಯಕದ ಶ್ರಮದಿಂದ ಕೂಡಿರುವ ಜೀವನವೇ ಶ್ರೇಷ್ಠ.**

ಗಾಂಧೀಜಿಯವರು ಹಲವು ಮತಧರ್ಮಗಳ ಸೌಹಾರ್ದದಲ್ಲಿ ನಂಬಿಕೆ ಇಟ್ಟುಕೊಂಡಿದ್ದರು. ಹೀಗಾಗಿ, ಅವರು ಸಕಲರನ್ನೂ ಒಂದೇ ದೃಷ್ಟಿಯಿಂದ ಕಾಣುತ್ತಿದ್ದರು. ಅವರ ಪ್ರಕಾರ, ಕೋಮುಗಲಭೆಗಳು ಹೇಡಿಗಳು ಮಾಡುವ ಕೆಲಸವಾಗಿತ್ತು. ಅಲ್ಲದೆ, ಯಾವ ಧರ್ಮದಲ್ಲೂ ಗೂಂಡಾಗಿರಿಗೆ ಆಸ್ಪದವಿಲ್ಲ ಎಂದು ಹೇಳುತ್ತಿದ್ದ ಅವರು, ಪ್ರತೀ ಧರ್ಮವನ್ನೂ ಗೌರವಿಸಬೇಕೆಂಬ ನಂಬಿಕೆಯನ್ನು ರೂಢಿಸಿಕೊಂಡಿದ್ದರು. ಅವರ ಪ್ರಕಾರ, ಮತಧರ್ಮಗಳ ಹೆಸರಿನ ಸಂಕುಚಿತ ವಾದಕ್ಕಿಂತ ದೇಶವನ್ನು ಪ್ರೀತಿಸುವ ರಾಷ್ಟ್ರೀಯತೆ ಮುಖ್ಯವಾಗಿತ್ತು. ಹೀಗಾಗಿ

ಅವರು, “ಮೊದಲಿಗೆ ನಾವೆಲ್ಲರೂ ಭಾರತೀಯರು; ಆಮೇಲಷ್ಟೆ ಹಿಂದೂಗಳು, ಮುಸ್ಲಿಮರು,” ಎಂದು ಪ್ರತಿಪಾದಿಸುತ್ತಿದ್ದರು. ಅವರು, ಅಲ್ಪಸಂಖ್ಯಾತರು ಕೂಡ ಸುರಕ್ಷಿತವಾಗಿ ಬದುಕುವಂಥ ಸಮಾನ ಪೌರತ್ವದ ಕಲ್ಪನೆಯನ್ನು ನಮಗೆ ನೀಡಿದ್ದಾರೆ. ಗಾಂಧೀಜಿಯವರು ನಡೆಸುತ್ತಿದ್ದ ಪ್ರತಿಯೊಂದು ರಾಜಕೀಯ ಸಭೆಯಲ್ಲೂ ಆಶ್ರಮದ ಭಜನೆ ನಡೆಯುತ್ತಿತ್ತು. ಈ ಭಜನೆಗಳು 'ಸಬ್ ಕೋ ಸನ್ಮತಿ ದೇ ಭಗವಾನ್,' ಎನ್ನುವ ಉದಾತ್ತ ಆಲೋಚನೆಯಿಂದ ಕೂಡಿರುತ್ತಿದ್ದವು.

ಸಬ್ ಕೊ ಸನ್ಮತಿ

ಗಾಂಧೀಜಿಯವರು, ಸಾಧಿಸಲು ತುಂಬಾ ಕಷ್ಟಕರವಾದ, ಆದರೆ ತಾವು ಮಾತ್ರ ಯಶಸ್ವಿಯಾಗಿ ಮಾಡಿ ತೋರಿಸಿದ ಐದು ಅಂಶಗಳಿಗೆ ಜಗತ್ತಿನೆಲ್ಲೆಡೆ ಮನೆಮಾತಾಗಿದ್ದಾರೆ. ಅವು ಯಾವುವೆಂದರೆ–

* **ದ್ವೇಷಕ್ಕೆ ಪ್ರತಿಯಾಗಿ ಪ್ರೀತಿಯನ್ನು ತೋರಿಸುವುದು.**
* **ಈ ಸಮಾಜವು ಯಾರನ್ನು ಹೊರಗಿಟ್ಟಿದೆಯೋ ಅವರನ್ನು ಸೇರಿಸಿಕೊಳ್ಳುವುದು.**
* **ಬೇರೆ ಯಾರಾದರೂ ತಪ್ಪು ಮಾಡಿದರೆ ಅದನ್ನು ಉದಾರವಾಗಿ ಮರೆತು ಬಿಡುವುದು.**

* ನಾವು ಮಾಡಿದ ತಪ್ಪನ್ನು ಒಪ್ಪಿಕೊಳ್ಳುವುದು.
* ಡಾಂಭಿಕತೆಯನ್ನು ಬಿಟ್ಟು ಸರಳವಾಗಿರುವುದು.

ಗಾಂಧೀಜಿಯವರು ಆಧ್ಯಾತ್ಮಿಕತೆಗೂ ಮೌಲಿಕವಾದ ಕೊಡುಗೆಯನ್ನು ನೀಡಿದ್ದು, ಆ ಅಂಶಗಳು ಕೆಳಕಂಡಂತಿವೆ-

* ಸತ್ಯ ಮತ್ತು ಅಹಿಂಸೆ
* ಕೇಡು/ಕೆಡುಕಿನೊಂದಿಗೆ ಅಸಹಕಾರ
* ಶಾಂತಿಗಾಗಿ ಯಾವುದೇ ನೋವನ್ನು ಅನುಭವಿಸುವುದು/ ಪ್ರಾಣತ್ಯಾಗವನ್ನಾದರೂ ಮಾಡುವುದು.
* ಶಾಂತಿ ಮತ್ತು ನ್ಯಾಯದ ಪ್ರತಿಪಾದನೆಯಲ್ಲಿ ನಂಬಿಕೆ
* ಪ್ರಾರ್ಥನೆ ಮತ್ತು ಧ್ಯಾನದಲ್ಲಿ ನಂಬಿಕೆ.
* ಆಧ್ಯಾತ್ಮಿಕ ಶ್ರೇಯಸ್ಸನ್ನು ಗಳಿಸಲು ವ್ಯಕ್ತಿಗತ ಪ್ರಾಮಾಣಿಕತೆ ಅತ್ಯಗತ್ಯ ಎಂಬುದರ ಅರಿವು
* ಸಮಾಜದ ಬಡವರು ಮತ್ತು ದುರ್ಬಲರೊಂದಿಗೆ ಒಂದಾಗುವುದು.
* ಕೆಲಸವನ್ನು ಮಾಡು. ಆದರೆ, ಅದರ ಫಲದ ಬಗ್ಗೆ ಯೋಚಿಸಬೇಡ ಎಂಬ ಭಗವದ್ಗೀತೆಯ ಮಾತಿನಲ್ಲಿ ನಂಬಿಕೆ.

* ಪ್ರತಿಯೊಂದು ಧರ್ಮವೂ ಸತ್ಯದಿಂದ ಕೂಡಿದ್ದು, ಗೌರವಕ್ಕೆ ಅರ್ಹವಾಗಿದೆ.
* ರಾಜಕಾರಣ ಮತ್ತು ಸಾಮಾಜಿಕ ಜೀವನದಲ್ಲಿ ನಿರ್ಭೀತವಾಗಿ ಸತ್ಯದ ಅನುಸರಣೆ ಮಾಡುವುದು.

ರಾಜಕಾರಣದ ಆಧ್ಯಾತ್ಮೀಕರಣ

ಗಾಂಧೀಜಿಯವರು ಆಧುನಿಕ ಭಾರತದ ರಾಜಕಾರಣಕ್ಕೂ ತುಂಬಾ ಬೆಲೆಯುಳ್ಳ ಕಾಣಿಕೆ ನೀಡಿದ್ದು, ಅವನ್ನು ಹೀಗೆ ಹೇಳಬಹುದು–

* ಹಿಂದೂ ಮಹಾಸಭಾ ಪ್ರತಿಪಾದಿಸುತ್ತಿದ್ದ 'ಸಾಂಸ್ಕೃತಿಕ ರಾಷ್ಟ್ರೀಯತೆ' ಮತ್ತು ಮಹಮದ್ ಅಲಿ ಜಿನ್ನಾ ಹೇಳುತ್ತಿದ್ದ 'ಧಾರ್ಮಿಕ ರಾಷ್ಟ್ರೀಯತೆ'ಗೆ ಬದಲಾಗಿ 'ನಾಗರಿಕ ರಾಷ್ಟ್ರೀಯತೆ'ಯ ಪರಿಕಲ್ಪನೆಯನ್ನು ಮುಂಚೂಣಿಗೆ ತಂದಿದ್ದು ಗಾಂಧೀಜಿಯವರ ಮಹತ್ತರ ಕೊಡುಗೆಯಾಗಿದೆ.
* ವಿಕೇಂದ್ರೀಕೃತ ಸಂಸದೀಯ ಸ್ವರಾಜ್ಯದ ಸ್ಥಾಪನೆ.
* ಭಾರತೀಯ ಆಯಾಮವುಳ್ಳ ಮಾನವ ಹಕ್ಕುಗಳು.
* ಆರ್ಥಿಕ ಪ್ರಗತಿಯ ಜತೆಜತೆಯಲ್ಲೇ ರಾಜಕೀಯ ಸ್ವಾತಂತ್ರ್ಯ ಸಾಗಬೇಕು.

ನಮ್ಮ ರಾಜಕಾರಣದಲ್ಲಿರುವ ಹಿಂಸೆಯು ಕ್ರಮೇಣ ಕಡಿಮೆಯಾಗಬೇಕು ಎನ್ನುತ್ತಿದ್ದ ಗಾಂಧೀಜಿ, ಈ ನಿಟ್ಟಿನಲ್ಲಿ ಮಾಡಿದ ಪ್ರತಿಪಾದನೆಗಳು ಹೀಗಿವೆ–

* **ಸ್ಥಳೀಯ ಹಂತದವರೆಗೂ ಸಾಂವಿಧಾನಿಕ ಸರಕಾರ ರಚನೆ.**
* **ನಿಷ್ಪಕ್ಷಪಾತವಾಗಿ ಕೆಲಸ ಮಾಡುವ, ರಚನಾತ್ಮಕ ವ್ಯಕ್ತಿಗಳ ಪಡೆ.**
* **ಕೆಲವು ನಿರ್ದಿಷ್ಟ ಸಮಸ್ಯೆಗಳ ಪರಿಹಾರಕ್ಕಾಗಿ ನಾಗರಿಕ ಅಸಹಕಾರ.**
* **ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣಾ ವ್ಯವಸ್ಥೆಯಡಿ ಸೇವಾ ಮನೋಭಾವದೊಂದಿಗೆ ಪಕ್ಷ ರಾಜಕಾರಣ.**

ರಾಜಕೀಯವನ್ನು ಆಧ್ಯಾತ್ಮೀಕರಿಸಿದ ಗಾಂಧೀಜಿ, ಈ ಬಗ್ಗೆ ಆಡುತ್ತಿದ್ದ ಮನೋಜ್ಞವಾದ ಮಾತುಗಳು ಹೀಗಿವೆ:

* **ನನ್ನ ಪಾಲಿಗೆ ದೇವರೆಂದರೆ ಸತ್ಯ ಮತ್ತು ಪ್ರೀತಿ; ದೇವರೆಂದರೆ ನ್ಯಾಯ–ನೀತಿ; ದೇವರೆಂದರೆ, ನಿರ್ಭೀತಿಯ ಸ್ಥಿತಿ.**
* **ರಾಜಕಾರಣದಲ್ಲಿರುವ ನನ್ನ ಸ್ನೇಹಿತರು ರಾಜಕೀಯದ ನನ್ನ ಕಲ್ಪನೆಯಿಂದ ಹತಾಶರಾಗಿದ್ದು, ಇದು ನನ್ನ ಧರ್ಮದಿಂದ ಒಡಮೂಡಿದೆ ಎನ್ನುತ್ತಾರೆ. ಅವರ ಮಾತು**

ಸರಿಯಾಗಿಯೇ ಇದೆ. ಏಕೆಂದರೆ, ಧರ್ಮವೇ ನನ್ನ ಪ್ರತಿಯೊಂದೂ ಚಟುವಟಿಕೆಗಳ ಮೂಲವಾಗಿದೆ. ಯಾವುದೇ ಒಬ್ಬ ಧಾರ್ಮಿಕ ವ್ಯಕ್ತಿಯ ಸಮಸ್ತ ಚಟುವಟಿಕೆಗಳೂ ಅವನ ಧರ್ಮದ ಅಂತರಂಗದಿಂದಲೇ ಹುಟ್ಟಬೇಕು. ಏಕೆಂದರೆ, 'ಧರ್ಮ'ವೆಂದರೆ, ಆ ದೇವರಿಗೆ ತಲೆಬಾಗುವುದೇ ಆಗಿದೆ. ಇಷ್ಟೇ ಅಲ್ಲ, ನಿಮ್ಮ ಕಣಕಣವನ್ನೂ ಆ ದೇವರೇ ಆಳುತ್ತಿರುತ್ತಾನೆ.

* ಇನ್ನೊಬ್ಬರಿಗೆ ನ್ಯಾಯವನ್ನು ಒದಗಿಸುವ ಮೂಲಕ ನಾವು ನ್ಯಾಯವನ್ನು ಪಡೆಯಬಹುದು ಎನ್ನುವುದು ನನ್ನ ಅನುಭವದಿಂದ ದೃಢಪಟ್ಟಿದೆ.

* ನಿರ್ಭೀತಿಯೇ ಆಧ್ಯಾತ್ಮಿಕತೆಯ ಮೊಟ್ಟಮೊದಲ ಗುಣ. ಹೇಡಿಗಳು ಎಂದಿಗೂ ನೈತಿಕತೆಯನ್ನು ಹೊಂದಿರಲಾರರು. ಎಲ್ಲಿ ಭಯವಿರುತ್ತದೋ ಅಲ್ಲಿ ಧರ್ಮವಿರುವುದಿಲ್ಲ.

* ನಾವು ಮಾಡಿದ ತಪ್ಪುಗಳನ್ನು ದೊಡ್ಡದಾಗಿ ಬಿಂಬಿಸಿಕೊಳ್ಳಬೇಕು; ಹಾಗೆಯೇ, ಇತರರು ಮಾಡಿದ ತಪ್ಪುಗಳನ್ನು ಆದಷ್ಟೂ ಮರೆತು ಬಿಡಬೇಕು. ಆತ್ಮ ಶುದ್ಧೀಕರಣಕ್ಕೆ ಇದಕ್ಕಿಂತ ಅತ್ಯುತ್ತಮ ಮಾರ್ಗವಿಲ್ಲ– ಇದೇ ಬದುಕಿನ ಸುವರ್ಣ ನಿಯಮ.

* ಸೋಲಾಗಲಿ, ಗೆಲುವಾಗಲಿ ನಮ್ಮ ಕೈಯಲ್ಲಿಲ್ಲ. ಅವೆಲ್ಲವೂ ಇರುವುದು ಆ ಭಗವಂತನ ಕೈಯಲ್ಲಷ್ಟೆ. ಹೀಗಾಗಿ, ನಮ್ಮನ್ನು ನಾವು ಅವನಿಗೆ ಅರ್ಪಿಸಿಕೊಳ್ಳೋಣ. ಏಕೆಂದರೆ, ಎಲ್ಲವನ್ನೂ ಆತನ ಇಚ್ಛೆಯೇ ನಿರ್ಧರಿಸುತ್ತದೆ.
* ನಾನೊಬ್ಬ ಸಂತನಾಗಿದ್ದು, ರಾಜಕಾರಣದಲ್ಲಿ ನಾನು ಅಪ್ರಸ್ತುತವಾಗುತ್ತಿದ್ದೇನೆ ಎಂದು ಉಳಿದವರು ನನ್ನ ಬಗ್ಗೆ ಹೇಳುತ್ತಾರೆ. ಆದರೆ, 'ನಾನೊಬ್ಬ ರಾಜಕಾರಣಿಯಾಗಿದ್ದು, ಸಂತನಾಗಲು ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದೇನೆ,' ಎಂದು ನಾನು ಅವರಿಗೆಲ್ಲ ಹೇಳುತ್ತೇನೆ.

ಗಾಂಧೀಜಿ, ಭಾರತದ ಬಗ್ಗೆ ತಮ್ಮದೇ ಆದ ಕಲ್ಪನೆಯನ್ನು ಹೊಂದಿದ್ದರು. ಅದು ಕೆಳಕಂಡಂತಿದೆ–

* ನನ್ನ ಕನಸಿನ ಭಾರತದಲ್ಲಿ ಕಡುಬಡವರಿಗೆ ಕೂಡ ಇದು ನಮ್ಮ ದೇಶವೆನ್ನುವ ಭಾವನೆ ಇರಬೇಕು. ಜತೆಗೆ, ಇಲ್ಲಿ ಮೇಲ್ವರ್ಗ, ಕೆಳವರ್ಗ ಎನ್ನುವ ತಾರತಮ್ಯ ಇರಬಾರದು. ಇಲ್ಲಿ ಎಲ್ಲ ಸಮುದಾಯಗಳೂ ಪರಸ್ಪರ ಸೌಹಾರ್ದದಿಂದ ಬದುಕಬೇಕು. ಇಂಥ ಭಾರತದಲ್ಲಿ ಅಸ್ಪೃಶ್ಯತೆಗಾಗಲಿ, ಕುಡಿತಕ್ಕಾಗಲಿ ಕಿಂಚಿತ್ತೂ ಆಸ್ಪದವಿರಬಾರದು.

ಪುರುಷರಂತೆಯೇ ಮಹಿಳೆಯರಿಗೂ ಎಲ್ಲಾ ಹಕ್ಕುಗಳೂ ಇರಬೇಕು. ಜಗತ್ತಿನೊಂದಿಗೆ ನಾವು ಸದಾ ಶಾಂತಿಯಿಂದ ಇರಬೇಕು...."

ಹೀಗೆ ಗಾಂಧೀಜಿಯವರು ತಮ್ಮ ಹತ್ಯೆಗೂ ಕೇವಲ ಮೂರು ದಿನಗಳ ಹಿಂದೆ 'ಹರಿಜನ' ಪತ್ರಿಕೆಯಲ್ಲಿ "ನಾವು ರಾಜಕೀಯ ಸ್ವಾತಂತ್ರ್ಯವನ್ನೇನೋ ಪಡೆದುಕೊಂಡಿದ್ದೇವೆ. ಆದರೆ ನಾವಿನ್ನೂ ಆರ್ಥಿಕ, ಸಾಮಾಜಿಕ ಮತ್ತು ನೈತಿಕ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬೇಕಾಗಿದೆ," ಎಂದು ಬರೆದಿದ್ದರು.

ಗಾಂಧೀಜಿಯವರ ಈ ಆಧ್ಯಾತ್ಮೀಕರಣಗೊಂಡ ರಾಜಕಾರಣವು ದೂರಗಾಮಿಯಾಗಿದ್ದು, ನಮ್ಮ ದೇಶದ ಎಲ್ಲೆಕಟ್ಟುಗಳನ್ನು ಮೀರಿ, ಜಗತ್ತಿನಾದ್ಯಂತ ಪಸರಿಸುತ್ತಿದೆ. 2010ರಲ್ಲಿ ಮುಂಬೈನ ಗಾಂಧಿ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದ್ದ ಅಮೆರಿಕದ ಅಂದಿನ ಅಧ್ಯಕ್ಷ ಬರಾಕ್ ಒಬಾಮಾ, "ಗಾಂಧೀಜಿ ಕೇವಲ ಭಾರತಕ್ಕೆ ಮಾತ್ರ ನಾಯಕರಲ್ಲ, ಅವರು ಇಡೀ ವಿಶ್ವದ ನಾಯಕರು," ಎಂದು ಬರೆದಿದ್ದರು. 'ಟೈಮ್ಸ್' ಪತ್ರಿಕೆಯು 1999ರಲ್ಲಿ ತಾನು ಪ್ರಕಟಿಸಿದ್ದ ಲೇಖನವೊಂದರಲ್ಲಿ "ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ದಲಾಯಿ ಲಾಮಾ, ಮಾರ್ಟಿನ್ ಲೂಥರ್ ಕಿಂಗ್, ನೆಲ್ಸನ್ ಮಂಡೇಲಾ ಮುಂತಾದವರೆಲ್ಲ

ಗಾಂಧೀಜಿಯವರು ಪ್ರತಿಪಾದಿಸುತ್ತಿದ್ದ ಅಹಿಂಸಾ ತತ್ತ್ವದ ಆಧ್ಯಾತ್ಮಿಕ ವಾರಸುದಾರರು," ಎಂದು ಬಣ್ಣಿಸಿತ್ತು. ಇಂಥ ಮಹಾತ್ಮ ಗಾಂಧೀಜಿಯವರ ಜನ್ಮದಿನವಾದ ಅಕ್ಟೋಬರ್ 2ನೇ ತಾರೀಖನ್ನು ವಿಶ್ವಸಂಸ್ಥೆಯು 'ಅಂತಾರಾಷ್ಟ್ರೀಯ ಅಹಿಂಸಾ ದಿನ'ವೆಂದು ಘೋಷಿಸಿದೆ. ತಮ್ಮ ಬದುಕಿನ ರೀತಿನೀತಿಗಳಿಗೆ ಇದಕ್ಕಿಂತ ಹೆಚ್ಚಿನ ಮನ್ನಣೆ ಇನ್ನೇನು ಬೇಕು ಹೇಳಿ?

'ವಿಶ್ವ ತತ್ತ್ವಶಾಸ್ತ್ರ ದಿನ'ದಂದು, ಈ ಪವಿತ್ರ ಸಂದರ್ಭದಲ್ಲಿ, ನನ್ನ ಕೆಲವು ಆಲೋಚನೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಅವಕಾಶ ಕೊಡುವ ಮೂಲಕ, ನೀವು ನನ್ನನ್ನು ಗೌರವಿಸಿದ್ದೀರಿ.

ಎಲ್ಲರಿಗೂ ನಮಸ್ಕಾರ.

ಮಹಾತ್ಮ ಗಾಂಧಿ
ಮತ್ತು ಆಧ್ಯಾತ್ಮಿಕ ರಾಜಕಾರಣ

ನಮಗೆ ಅಧ್ಯಾತ್ಮ ಜಗತ್ತಿನ ಸಂಕೇತವಾಗಿ ಶ್ರೀರಾಮಕೃಷ್ಣ ಪರಮಹಂಸ–ಶ್ರೀರಮಣರಿದ್ದಾರೆ. ರಾಷ್ಟ್ರಕುಂಡಲಿನಿಯ ಸಮಸ್ತವನ್ನು ಜಾಗೃತಗೊಳಿಸಲು ಸ್ವಾಮಿ ವಿವೇಕಾನಂದರು ಹಲವು ರೂಪಗಳಲ್ಲಿ ನಮ್ಮೊಡನೆ ಇದ್ದಾರೆ! ನಮ್ಮ ನೆಲೆಯನ್ನು ನಾವು ತಿಳಿಯುತ್ತ, ಪ್ರತಿದಿನವೂ ವಿರಕ್ತರಾಷ್ಟ್ರಕರಾಗಿಯೇ ಉಳಿಯಲು ಮಹಾತ್ಮ ಗಾಂಧೀಜಿಯವರು ನಮ್ಮೊಡನೆ ಇದ್ದಾರೆ. ಡಾ. ವೂಡೇ ಪಿ. ಕೃಷ್ಣ ಅವರು ಈ ದಿಕ್ಕಿನಲ್ಲಿ ನಡೆಸಿರುವ ಚಿಂತನೆಗಳು ನಮ್ಮ ರಾಷ್ಟ್ರಬದುಕಿಗೆ ಸಮೀಪವಾಗಿವೆ. ನಮ್ಮ ಬದುಕಿಗೆ ಕೈದೀವಿಗೆಯಾಗಿವೆ. ರಾಜಕಾರಣವನ್ನು ಆಧ್ಯಾತ್ಮೀಕರಣಗೊಳಿಸಿದ ಪ್ರಸಂಗಗಳನ್ನೂ ಘಟನೆಗಳನ್ನೂ ಹೇಳಿದ್ದಾರೆ. ಅವರ ಪ್ರತಿಹೆಜ್ಜೆಯು ಆಧ್ಯಾತ್ಮಿಕವೇ ಆದ ಬಗೆಗಳನ್ನು ಇಲ್ಲಿ ತಿಳಿಸಿದ್ದಾರೆ. ನಮ್ಮ ನಾಡಿನ ಪ್ರತಿಯೊಬ್ಬ ರಾಜಕಾರಣಿಯೂ ಈ ಹೊತ್ತಿಗೆಯನ್ನು ಓದಬೇಕು. ರಾಷ್ಟ್ರ–ಅಧ್ಯಾತ್ಮ–ಸಮಾಜ ತ್ರಿವಳಿಗೀತೆಗಳ ನಡುವೆ ಅವರು ಧ್ಯಾನಸ್ಥರಾಗಬೇಕು. ಇಂಥದೊಂದು ಅಪೂರ್ವ ಕಿರುಹೊತ್ತಗೆಯನ್ನು ರಚಿಸಿಕೊಟ್ಟ ಡಾ. ವೂಡೇ ಪಿ. ಕೃಷ್ಣ ಅವರಿಗೆ ನಮ್ಮ ಜನರ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಕಾರ್ಯದರ್ಶಿಗಳು, ಗಾಂಧಿ ಶಾಂತಿ ಪ್ರತಿಷ್ಠಾನ

ಬೆಲೆ ₹ 10

GANDHI PEACE FOUNDATION

ಪ್ರಕಾಶಕರು
ಗಾಂಧೀ ಶಾಂತಿ ಪ್ರತಿಷ್ಠಾನ
ಗಾಂಧೀಭವನ, ಬೆಂಗಳೂರು